



# ಪುದುಲ ಪುಷ್ಪ ಪ್ಯಾನ್ಸಿ

■ ಚಿತ್ರ– ಬರಹ: **ಮಂಜುನಾಥ ಡಿ.ಎಸ್.**

**ಮೂ**ರು ಪದರಗಳಲ್ಲಿ ಜೋಡಣೆಗೊಂಡಿರುವ ಪಂಚ ದಳಗಳ ಆಕರ್ಷಕ ಪುಷ್ಪ ಪ್ಯಾನ್ಸಿ. ಎರಡು ಮೂರು ಅಂಗುಲ ವ್ಯಾಸದ ಕುಸುಮಗಳಿವು. ಹಳದಿ, ಕನಕ, ಕಿತ್ತಳೆ, ಕೆನ್ನೀಲಿ, ಕೆಂಪು, ಬಿಳಿ, ನೇರಳೆ– ಹೀಗೆ ಬಗೆಬಗೆಯ ಬಣ್ಣಗಳಲ್ಲಿ ಕಾಣಸಿಗುತ್ತವೆ. ಸುಮಗಳ ನಡುವಿನಲ್ಲಿರುವ ಗಾಢ ವರ್ಣದ ಚಿತ್ತಾರ ಗಮನ ಸೆಳೆಯುತ್ತದೆ. ಒಂಭತ್ತು ಅಂಗುಲದಷ್ಟು ಎತ್ತರ ಬೆಳೆದು ಬಳ್ಳಿಯಂತೆ ಹರಡುವ ಸಸ್ಯದಲ್ಲಿ ಅರಳುವ ಹೂಗಳ ಅಂದ ಆಕರ್ಷಕ.

ಹತ್ತೊಂಭತ್ತನೆ ಶತಮಾನದ ಆದಿಯಲ್ಲಿ ಲೇಡಿ ಮೇರಿ ಎಲಿಜ಼ಬೆತ್ ಬೆನೆಟ್ ತನ್ನ ತಂದೆಯ ತೋಟದಲ್ಲಿದ್ದ ಎಲ್ಲ ಬಗೆಯ ವಯೊಲಗಳನ್ನು ಸಂಗ್ರಹಿಸಿ ಬೆಳೆಸಿದರು. ತಮ್ಮ ಮಾಲಿ ವಿಲಿಯಮ್ ರಿಚರ್ಡ್‌ಸನ್ ನೇತೃತ್ವದಲ್ಲಿ ಕಸಿ ವಿಧಾನದಿಂದ ಅಸಂಖ್ಯಾತ ಮಾದರಿಯ ಸಸ್ಯಗಳನ್ನು ಅಭಿವೃದ್ಧಿಗೊಳಿಸಿದರು. ಹೀಗೆ ಅಭಿವೃದ್ಧಿಗೊಳಿಸಿದ ಪ್ಯಾನ್ಸಿಗಳನ್ನು 1812ರಲ್ಲಿ ತೋಟಗಾರಿಕಾ ವಿಶ್ವಕ್ಕೆ ಪರಿಚಯಿಸಿದರು. 1833ರ ವೇಳೆಗೆ ನಾನೂರಕ್ಕೂ ಹೆಚ್ಚು ಪ್ರಭೇದಗಳ ಪ್ಯಾನ್ಸಿಗಳಿದ್ದುವೆಂದು ಹೇಳಲಾಗುತ್ತದೆ.

ಫ್ರೆಂಚ್ ಭಾಷೆಯ ಪೆನ್ಸ್ ಪದ ಪ್ಯಾನ್ಸಿ ಹೆಸರಿನ ಮೂಲ. ವಯೊಲ, ವಯೊಲೆಟ್, ಸ್ಟೆಪ್ ಮದರ್, ಫ್ಲಮ್ಮೋಲ, ಹಾರ್ಟ್ಸ್ ಈಸ್ ಇತ್ಯಾದಿ ಪ್ಯಾನ್ಸಿಯ ಪರ್ಯಾಯ ಹೆಸರುಗಳು.